ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1769
ಮಾನ್ಯ ಸದಸ್ಯರ ಹೆಸರು	ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು	ಉನ್ನತ ಶಿಕ್ಷಣ ಸಚಿವರು
ಉತ್ತರಿಸಬೇಕಾದ ದಿನಾಂಕ	14.03.2022

	ಪ್ರಶ್ನೆ	ಉತ್ತರ
(ಅ)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆ.ಎಸ್.ಓ.ಯು) ಮುಕ್ತ ಗಂಗೋತ್ರಿ ಮೈಸೂರು-2020 ಜುಲೈ ಆವೃತ್ತಿಯಲ್ಲಿ ಎಂ.ಬಿ.ಎ. ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಒಂದು ವರ್ಷದ (1st & 2nd sem) ಶೈಕ್ಷಣಿಕ ಅವಧಿಯು ಪೂರ್ಣಗೊಂಡಿರುವುದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಕೋವಿಡ್ -19 ರ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಎಂಬಿಎ ಕೋರ್ಸ್‌ಗೆ ಸಂಬಂಧಿಸಿದ ಶೈಕ್ಷಣಿಕ ಚಟುವಟಿಕೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕೈಗೊಂಡ ಕ್ರಮದ ಬಗ್ಗೆ ಅನುಬಂಧದಲ್ಲಿ ಇಡಲಾಗಿದೆ.
(ಆ)	ಎಂ.ಬಿ.ಎ. ವಿದ್ಯಾರ್ಥಿಗಳ ಸೆಮಿಸ್ಟರ್ 2,3 ಮತ್ತು 4 ನ್ನು ಪೂರ್ಣಗೊಳಿಸಲು ಯಾವ ರೀತಿಯಾಗಿ ಸರ್ಕಾರ ಕ್ರಮಕೈಗೊಂಡಿದೆ ವಿವರ ನೀಡುವುದು.	

ಸಂಖ್ಯೆ: ಇಡಿ 13 ಯುಓವಿ 2022

(ಡಾ. ಅಶ್ವತ್ಥನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಅನುಬಂಧ-1

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆ.ಎಸ್.ಓ.ಯು) ಮುಕ್ತ ಗಂಗೋತ್ರಿ, ಮೈಸೂರು-2020 ಜುಲೈ ಆವೃತ್ತಿಯಲ್ಲಿ ಎಂ.ಬಿ.ಎ. ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಒಂದು ವರ್ಷದ (1st & 2nd sem) ಶೈಕ್ಷಣಿಕ ಅವಧಿಯ ಕುರಿತು ವಿವರ:

ಪ್ರವೇಶಾತಿಗೆ ಸಂಬಂಧಿಸಿದಂತೆ:

- ಯುಜಿಸಿ (ಡೆಬ್)ಯ ನಿಯಮಾನುಸಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2020ರ ಜುಲೈ ಮತ್ತು ಜನವರಿ ಆವೃತ್ತಿಗಳಲ್ಲಿ ಪ್ರಥಮ ಎಂ.ಬಿ.ಎ. (1st & 2nd Sem) ಪ್ರವೇಶಾತಿ ಮಾಡಲಾಗಿರುತ್ತದೆ.

ಶೈಕ್ಷಣಿಕ ಚಟುವಟಿಕೆಗೆ ಸಂಬಂಧಿಸಿದಂತೆ:

- ಜುಲೈ 2020ರ ಆವೃತ್ತಿಯ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ದಿನಾಂಕ: 22.02.2021 ರಿಂದ 27.02.2021ರವರೆಗೆ Online ಸಂಪರ್ಕ ಕಾರ್ಯಕ್ರಮ (6 ದಿನ Online, 3 ದಿನ Offline) ನಡೆಸಲಾಗಿದೆ.
- ದಿನಾಂಕ: 28.02.2021 ರಿಂದ 15.03.2021 ರವರೆಗೆ Online ಸೆಮಿನಾರ್‌ಗಳನ್ನು ಈ ಕೆಳಕಂಡಂತೆ ನಡೆಸಲಾಗಿರುತ್ತದೆ;
  - ದಿನಾಂಕ: 28.02.2021 ರಿಂದ 02.03.2021ರವರೆಗೆ ಮೈಸೂರು, ಬೆಂಗಳೂರು, ಧಾರವಾಡ.
  - ದಿನಾಂಕ: 06.03.2021 ರಿಂದ 08.03.2021ರವರೆಗೆ ದಾವಣಗೆರೆ ಹಾಗೂ ಗುಲ್ಬರ್ಗಾ.
  - ದಿನಾಂಕ: 13.03.2021 ರಿಂದ 15.03.2021ರವರೆಗೆ ಮಂಗಳೂರು.

ಕೋವಿಡ್-19 ಸಮಸ್ಯೆಯಿಂದ ಕೆಲವು ವಿದ್ಯಾರ್ಥಿಗಳು ಸೆಮಿನಾರ್‌ಗೆ ಹಾಜರಾಗಿರದ ಕಾರಣ ಮತ್ತೊಮ್ಮೆ Online ಸೆಮಿನಾರ್‌ನ್ನು ದಿನಾಂಕ: 22.08.2021 ರಿಂದ 24.08.2021ರವರೆಗೆ ನಡೆಸಲಾಗಿದೆ.

ಜೂನ್ ಆವೃತ್ತಿಯ ವಿದ್ಯಾರ್ಥಿಗಳಿಗೆ Assignments ಸಲ್ಲಿಸಲು ದಿನಾಂಕ: 30.03.2021 ಕಡೆಯ ದಿನಾಂಕವಾಗಿರುತ್ತದೆ. ಕೋವಿಡ್-19 ಸಮಸ್ಯೆಯಿಂದ ಪರೀಕ್ಷೆಗಳನ್ನು ನಡೆಸದೇ ಆಂತರಿಕ ನಿಬಂಧನೆಗಳ ಆಧಾರದ ಮೇಲೆ Promote ಮಾಡಲಾಗಿರುತ್ತದೆ.

ಪರೀಕ್ಷೆಗೆ ಸಂಬಂಧಿಸಿದಂತೆ,

- 2020-21ನೇ ಜುಲೈ ಆವೃತ್ತಿಯಲ್ಲಿ ಸ್ನಾತಕ/ಸ್ನಾತಕೋತ್ತರ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಯುಜಿಸಿ ಮಾರ್ಗಸೂಚಿಗಳನ್ವಯ (MBA ಒಳಗೊಂಡಂತೆ) ಆಂತರಿಕ ಅಂಕಗಳ ಆಧಾರದ ಮೇಲೆ ಮುಂದಿನ ತರಗತಿಗೆ ಉತ್ತೀರ್ಣಗೊಳಿಸಲಾಗಿರುತ್ತದೆ.
- 2nd semester ಗೆ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಎಂ.ಬಿ.ಎ. ವಿದ್ಯಾರ್ಥಿಗಳ ಸೆಮಿಸ್ಟರ್ 2, 3 ಮತ್ತು 4 ನ್ನು ಪೂರ್ಣಗೊಳಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.

ಪ್ರವೇಶಾತಿಗೆ ಸಂಬಂಧಿಸಿದಂತೆ.

- 2020-21ರ ಜುಲೈ ಆವೃತ್ತಿಯಲ್ಲಿ ಪ್ರಥಮ ಎಂ.ಬಿ.ಎ. (1st & 2nd Sem) ಶಿಕ್ಷಣ ಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ 2021-22ರ ಜುಲೈ ಆವೃತ್ತಿಯಲ್ಲಿ ಅಂತಿಮ (ದ್ವಿತೀಯ ಸಾಲಿಗೆ) (3rd & 4th Sem) ಸಾಲಿಗೆ ಪ್ರವೇಶಾತಿ ನವೀಕರಣ (Renewal of admissions) ಮಾಡಲಾಗಿರುತ್ತದೆ.
- 2020-21ರ ಜನವರಿ ಆವೃತ್ತಿಯಲ್ಲಿ ಪ್ರಥಮ ಎಂ.ಬಿ.ಎ. (1st & 2nd Sem) ಶಿಕ್ಷಣಕ್ರಮಕ್ಕೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ 2021-22ರ ಜನವರಿ ಆವೃತ್ತಿಯಲ್ಲಿ ಅಂತಿಮ (ದ್ವಿತೀಯ ಸಾಲಿಗೆ) (3rd & 4th Sem) ಸಾಲಿಗೆ ಪ್ರವೇಶಾತಿ ನವೀಕರಣ (Renewal of admissions) ಮಾಡಲು ಪ್ರಕ್ರಿಯೆ ಪ್ರಾರಂಭಿಸಲಾಗಿದೆ.
- ಪ್ರಸ್ತುತ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲು ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗ ಕ್ರಮವಹಿಸುತ್ತಿದೆ.

ಶೈಕ್ಷಣಿಕ ಚಟುವಟಿಕೆಗೆ ಸಂಬಂಧಿಸಿದಂತೆ.

- 2ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ದಿನಾಂಕ: 04.12.2021 ರಿಂದ 09.12.2021ರವರೆಗೆ Online ಸಂಪರ್ಕ ಕಾರ್ಯಕ್ರಮ ನಡೆಸಲಾಗಿದೆ. ದಿನಾಂಕ: 11.12.2021 ರಿಂದ 13.12.2021 ರವರೆಗೆ Offline ಸೆಮಿನಾರ್‌ಗಳನ್ನು ಈ ಕೆಳಕಂಡಂತೆ ನಡೆಸಲಾಗಿದೆ.
  - ➢ ದಿನಾಂಕ: 11.12.2021 ರಿಂದ 13.12.2021 ರವರೆಗೆ ಮೈಸೂರು, ಬೆಂಗಳೂರು, ಮಂಗಳೂರು, ದಾವಣಗೆರೆ.
  - ➢ ದಿನಾಂಕ: 21.12.2021 ರಿಂದ 23.12.2021ರವರೆಗೆ ಧಾರವಾಡ ಹಾಗೂ ಗುಲ್ಬರ್ಗಾ.

  ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ Assignment ಸಲ್ಲಿಸಲು 27.12.2021 ಕಡೆಯ ದಿನಾಂಕವಾಗಿರುತ್ತದೆ.
- ಎಂ.ಬಿ.ಎ. ಮೂರನೇ ಸೆಮಿಸ್ಟರ್ ಕೋವಿಡ್-19 ಸಮಸ್ಯೆಯಿಂದ ಪರೀಕ್ಷೆಗಳನ್ನು ನಡೆಸದೇ ಆಂತರಿಕ ನಿಬಂಧನೆಗಳ ಆಧಾರದ ಮೇಲೆ Promote ಮಾಡಲಾಗಿರುತ್ತದೆ.
- ಎಂ.ಬಿ.ಎ. ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ದಿನಾಂಕ: 04.12.2021 ರಿಂದ 18.12.2021ರವರೆಗೆ Online ಸಂಪರ್ಕ ಕಾರ್ಯಕ್ರಮ ನಡೆಸಲಾಗಿದೆ.
  ದಿನಾಂಕ: 18.12.2021 ರಿಂದ 19.12.2021ರವರೆಗೆ Offline ಸೆಮಿನಾರ್ ಅನ್ನು ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆಸಲಾಗಿದೆ.
- ಎಂ.ಬಿ.ಎ. ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ Assignment ಸಲ್ಲಿಸಲು ದಿನಾಂಕ: 15.04.2021 ಕಡೆಯ ದಿನಾಂಕವಾಗಿರುತ್ತದೆ.

ಪರೀಕ್ಷೆಗೆ ಸಂಬಂಧಿಸಿದಂತೆ.

- 3ನೇ ಸೆಮಿಸ್ಟರ್‌ಗೆ ಯುಜಿಸಿ ಮಾರ್ಗಸೂಚಿಗಳನ್ವಯ ಆಂತರಿಕ ಅಂಕಗಳ ಆಧಾರದ ಮೇಲೆ ಮುಂದಿನ ತರಗತಿಗೆ ಉತ್ತೀರ್ಣಗೊಳಿಸಲಾಗಿರುತ್ತದೆ.
- 4ನೇ ಸೆಮಿಸ್ಟರ್‌ಗೆ ಪರೀಕ್ಷೆ ನಡೆಸಲು ಪರೀಕ್ಷಾ ಶುಲ್ಕ ಪಾವತಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ.